**ದಿನಾಂಕ: 02–08–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮುಂದುವರೆದ ಹಾಗೂ ಪ್ರಗತಿಯಲ್ಲಿರುವ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿ ಹಾಗೂ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಬಿ.ಇ.ಗೋವಿಂದರಾಜು, ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 2 | ಬಿ.ರಾಜೇಶ್, ಕಾ.ಪಾ.ಅ.(ಯೋಜನೆ) |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 3 | ಹೆಚ್.ಆರ್.ಕೃಷ್ಣಮೂರ್ತಿ, ಕಾ.ಪಾ.ಅ.(ಯೋಜನೆ) |
| 4 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 4 | ಎಲ್.ವೆಂಕಟೇಶ್ ಕಾ.ಪಾ.ಅ.(ಯೋಜನೆ–ಪಶ್ಚಿಮ) |
| 5 | ಶ್ರೀಮತಿ.ಲಕ್ಷ್ಮಿ | ಸದಸ್ಯರು | 5 | ಎನ್.ಪಿ.ಚಂದ್ರಶೇಖರ್, ಕಾ.ಪಾ.ಅ.(ಕೆರೆಗಳು) |
| 6 | ಶ್ರೀ.ಎಸ್.ಗಂಗಾಧರ್ | ಸದಸ್ಯರು | 6 | ಗಂಗಹನುಮಯ್ಯ, ಕಾ.ಪಾ.ಅ.(ಕೆರೆಗಳು) |
| 7 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 7 | ಪ್ರಕಾಶ್.ಎಸ್.ಬಾರಿಗಿಡದ, ಸ.ಕಾ.ನಿ.ಅ. |
| 8 | ಶ್ರೀಮತಿ.ಸರಳ | ಸದಸ್ಯರು | 8 | ಬಿ.ಬಸವರಾಜು, ಸ.ಕಾ.ನಿ.ಅ. |
| | | | 9 | ಎನ್.ಚಂದ್ರಶೇಖರ್, ಸ.ಕಾ.ನಿ.ಅ.(ಯೋ–ಪ) |
| | | | 10 | ಕೆ.ಆರ್.ಕೇಶವಮೂರ್ತಿ, ಎ.ಸಿ.ಎಫ್– ಕೆರೆಗಳು |
| | | | 11 | ಎನ್.ಎಲ್.ರಾಘವ, ಎ.ಸಿ.ಎಫ್– ಕೆರೆಗಳು |
| | | | 12 | ಸಿ.ಎಸ್.ರಾಜು, ಸ.ಅ.(ಯೋ–ಪ) |
| | | | 13 | ಎಸ್.ಚಂದ್ರಶೇಖರ್, |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಸಮಿತಿಯು, ದಿನಾಂಕ:07–06–2012 ರಂದು ಪತ್ರ ಬರೆದು, 2010–11 ಮತ್ತು 2011–12ನೇ ಸಾಲಿನಲ್ಲಿ ಕಾರ್ಯಪಾಲಕ ಅಭಿಯಂತರರು(ಯೋಜನೆ)ರವರು, ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಮಾಹಿತಿಯನ್ನು ಸಮಿತಿಯ ಪರಿಶೀಲನೆಗೆ ಒದಗಿಸುವಂತೆ ಕೋರಲಾಗಿತ್ತು, ಅದರಂತೆ, ದಕ್ಷಿಣ ಮತ್ತು ಪಶ್ಚಿಮ ವಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಮಾಹಿತಿಗಳು ಒದಗಿಸಿದ್ದು, ಉಳಿದ ವಲಯದವರು ಮಾಹಿತಿ ಕೋರಿ ಸುಮಾರು ಐವತ್ತು ದಿನಗಳ ಮೇಲಾಗಿದ್ದರೂ ಸಹ ಮಾಹಿತಿ ಒದಗಿಸಲು ವಿಫಲರಾಗಿರುವ ಬಗ್ಗೆ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದರು. ಮಾಹಿತಿ ನೀಡಲು ನಿರ್ಲಕ್ಷತೆ ತೋರಿಸಲು ಕಾರಣವನ್ನು ತಿಳಿಸುವಂತೆ ಸೂಚಿಸುತ್ತಾ, ಸಮಿತಿಯು ಕೋರಿರುವ ಮಾಹಿತಿಯನ್ನು ವಿಳಂಬಕ್ಕೆ ಅಸ್ಪದ ನೀಡದಂತೆ ಜರೂರಾಗಿ ಸಮಿತಿಗೆ ಮಾಹಿತಿ ಒದಗಿಸುವುದು. ಇಲ್ಲದಿದ್ದಲ್ಲಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗುವುದೆಂದು ಅಧ್ಯಕ್ಷರು ಸೂಚಿಸಿದರು.

*ಸಮಿತಿಯಿಂದ ಸಭೆಯ ಸೂಚನಾ ಪತ್ರವನ್ನು ಎಲ್ಲಾ ಅಧಿಕಾರಿಗಳಿಗೆ ಒಂದು ವಾರಕ್ಕೆ ಮುಂಚಿತವಾಗಿ ಕಳುಹಿಸಲಾಗಿದ್ದರೂ ಸಹ, ಸಭೆಗೆ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ*

**ಮುಂದುವರೆದಿದೆ. . .**

*ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ ವಲಯ, ಮಹದೇವಪುರ ವಲಯ, ದಾಸರಹಳ್ಳಿ ವಲಯ ಹಾಗೂ ಯಲಹಂಕ ವಲಯದವರು ಸಭೆಗೆ ಹಾಜರಾಗದೇ ನಿರ್ಲಕ್ಷತೆ ತೋರಿರುವ ಬಗ್ಗೆ ಆಯುಕ್ತರ ಗಮನಕ್ಕೆ ತಂದು ಕಾರಣ ಕೇಳಿ ಪತ್ರವನ್ನು ಜಾರಿ ಮಾಡಲು ಶಿಫಾರಸ್ಸು ಮಾಡಲಾಗುವುದೆಂದು ತಿಳಿಸಿದರು.*

ಸಮಿತಿಯು ದಿನಾಂಕ:13–07–2012 ರಂದು ಆಳ್ಳಾಲಸಂದ್ರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ತಪಾಸಣೆಗಾಗಿ ಭೇಟಿ ನೀಡಿದಾಗ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇನ್ನು ಕೆಲವು ಕಾಮಗಾರಿಗಳು ಅಪೂರ್ಣಗೊಂಡಿರುವುದು ಕಂಡು ಬಂದಿದ್ದು, ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟ ಮೂಲ ಕಡತಗಳು ಹಾಗೂ ಅಳತೆ ಪುಸ್ತಕಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸುವಂತೆ ಕಾರ್ಯ ಪಾಲಕ ಅಭಿಯಂತರರು (ಯೋಜನೆ–ಯಲಹಂಕ) ರವರಿಗೆ ಪತ್ರ ಬರೆದು ಸೂಚಿಸಲಾಗಿತ್ತು. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಯಾರು ಸಭೆಗೆ ಹಾಜರಾಗಿರುವುದಿಲ್ಲವೆಂದು ಹಾಗೂ ಮಾಹಿತಿಯನ್ನು ಒದಗಿಸಿರುವುದಿಲ್ಲ. ಈ ಕುರಿತು *ಮಾಹಿತಿಯನ್ನು ಜರೂರಾಗಿ ಸಮಿತಿಯ ಪರಿಶೀಲನೆಗೆ ಒದಗಿಸಲು* ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಮುಖೇನ ನೋಟೀಸ್ ಜಾರಿ ಮಾಡಲು *ಸೂಚಿಸಲಾಯಿತು.*

ಸಮಿತಿಯು ಟೆಂಡರ್ ಕರೆಯಲು ಈ ಕೆಳಕಂಡ ಕಾಮಗಾರಿಗಳಿಗೆ ಈಗಾಗಲೇ ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿವೆ ಎಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿದರು ಹಾಗೂ ಹದಿನೈದು ದಿನಗಳೊಳಗಾಗಿ ಈ ಕೆಳಕಂಡ ಎಲ್ಲಾ ಕಾಮಗಾರಿಗಳಿಗೂ ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.

| **ಕ್ರ. ಸಂ.** | **ಕಾಮಗಾರಿ ವಿವರ(ಕೆರೆಯ ಹೆಸರು)** | **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)** | **ಸಮಿತಿಯು ಅನುಮೋದನೆ ನೀಡಿರುವ ಸಂಖ್ಯೆ ಹಾಗೂ ದಿನಾಂಕ** |
|---|---|---|---|
| 1. | **ದಾಸರಹಳ್ಳಿ ಕೆರೆಯ** ಸಮಗ್ರ ಅಭಿವೃದ್ಧಿ ಹಂತ – 2 ರ ಕಾಮಗಾರಿ | **300.00** | **ಸಂ.31/ ದಿ:10–11–2011** |
| 2. | **ದೊಡ್ಡಕನ್ನಹಳ್ಳಿಕೆರೆಯ** ಸಮಗ್ರ ಅಭಿವೃದ್ಧಿ ಕಾಮಗಾರಿ | **375.00** | **ಸಂ.35/ ದಿ:22–12–2011** |
| 3. | **ಶ್ರೀಗಂಧದಕಾವಲು** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ | **300.00** | **ಸಂ.36/ ದಿ:22–12–2011** |
| 4. | **ದೀಪಾಂಜಲಿ** ಕೆರೆಗೆ ಕಲುಷಿತ ನೀರನ್ನು ಶುದ್ಧೀಕರಣ ಗೊಳಿಸುವ ಕಾಮಗಾರಿ | **153.39** | **ಸಂ.49/ ದಿ:08–03–2012** |
| 5. | **ಮುನ್ನೇಗೊಳಲು** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ | **250.00** | **ಸಂ.56/ ದಿ:08–03–2012** |
| 6. | ದೊರೆಕೆರೆಯ ಹಂತ –2 ರಲ್ಲಿ ಸಿಲ್ಟ್ ಡ್ರಾಫ್ಟ್ ನಿರ್ಮಾಣ ಕಾಮಗಾರಿ | **51.00** | **ಸಂ.58/ ದಿ:08–03–2012** |
| 7. | **ದೀಪಾಂಜಲಿ** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ –3 | **70.00** | **ಸಂ.61/ ದಿ:08–03–2012** |

**ಮುಂದುವರೆದಿದೆ. . . .**

| | | | |
|---|---|---|---|
| 8. | **ಮತ್ತಿಕೆರೆಯ** ಸಮಗ್ರ ಅಭಿವೃದ್ಧಿ ಕಾಮಗಾರಿ | 300.00 | ಸಂ.68/ ದಿ:22-03-2012 |
| 9. | ಜೆ.ಪಿ.ಪಾರ್ಕ್‌ನಲ್ಲಿರುವ ಕೆರೆಯ ಅಭಿವೃದ್ಧಿ ಕಾಮಗಾರಿ. | 300.00 | ಸಂ.69/ ದಿ:22-03-2012 |
| 10. | **ಕೂಡ್ಲು ಚಿಕ್ಕಕೆರೆ,** ಸರ್ವೆ ನಂ.70, ಅಭಿವೃದ್ಧಿಗೊಳಿಸುವ ಕಾಮಗಾರಿ | 195.00 | ಸಂ.79/ ದಿ:03-04-2012 |
| 11. | **ದೇವಸಂದ್ರಕೆರೆಯ** ಮಳೆನೀರು ಸಂಗ್ರಹಣಾ ಕಾಮಗಾರಿ | 234.25 | ಸಂ.80/ ದಿ:22-03-2012 |
| 12. | **ದೊಡ್ಡಬೊಮ್ಮಸಂದ್ರ** ಕೆರೆ ಸಮಗ್ರ ಅಭಿವೃದ್ಧಿ ಹಂತ – 1ರ ಕಾಮಗಾರಿ. | 385.00 | ಸಂ.11/ ದಿ:14-06-2012 |
| 13. | **ಉತ್ತರಹಳ್ಳಿ ಕೆರೆ** ಹಂತ –3 ರ ಅಭಿವೃದ್ಧಿ ಕಾಮಗಾರಿ. | 100.00 | ಸಂ.12/ ದಿ:14-06-2012 |

**ಶ್ರೀ.ಪ್ರಕಾಶ್, ಸ.ಕಾ.ನಿ.ಅ.**ರವರು ಮಾತನಾಡುತ್ತಾ, ಶ್ರೀಗಂಧದಕಾವಲು ಕೆರೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಗೊಂಡಿದ್ದು, ಮತ್ತೇ ಪಾಲಿಕೆಯಿಂದ ಕೆರೆಯನ್ನು ಸಮಗ್ರ ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಿದರು.

**ಶ್ರೀ.ಚಂದ್ರಶೇಖರರಾಜು, ಸಮಿತಿ ಸದಸ್ಯರು** : ಶ್ರೀಗಂಧದ ಕಾವಲು ಕೆರೆಯು ಬಿಡಿಎಗೆ ಹಸ್ತಾಂತರಗೊಂಡಿದ್ದಲ್ಲಿ, ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಪಾಲಿಕೆಯಿಂದ ಮೀಸಲಿಟ್ಟಿರುವ 3.00ಕೋಟಿ ರೂಪಾಯಿಗಳನ್ನು ಪಾಲಿಕೆಗೆ ಸೇರಿದ ಇತರೇ ಕೆರೆಗಳ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು, ಸಮಗ್ರವಾದ ಟಿಪ್ಪಣಿಯನ್ನು ತಯಾರಿಸಿ ಸಿ.ಎಫ್.ಓ.ಗೆ ಕಳುಹಿಸಿ ಕೊಡುವಂತೆ ಸಲಹೆ ನೀಡಿದರು ಹಾಗೂ ಬೆಂಗಳೂರು ನಗರವನ್ನು ಗಾರ್ಡನ್ ಸಿಟಿ, ಉದ್ಯಾನವನಗಳ ನಗರ ಎಂದು ಕರೆಯುತ್ತಿದ್ದು, ಈ ನಿಟ್ಟಿನಲ್ಲಿ ಸಮಿತಿಯ ಮೇಲೆ ನಿರೀಕ್ಷೆ ಹಾಗೂ ಒತ್ತಡ ಜಾಸ್ತಿ ಇದ್ದು, ಅಧಿಕಾರಿಗಳ ಸಲಹೆ, ಶ್ರಮ ಹಾಗೂ ಸಹಕಾರವಿದ್ದರೆ ಬೆಂಗಳೂರು ನಗರವನ್ನು ಇನ್ನೂ ಹೆಚ್ಚಿನ ಅಭಿವೃದ್ಧಿ ಪಥದತ್ತ ಕೊಂಡೊಯ್ಯಬಹುದೆಂದು ತಿಳಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. ವಿಷಯ ಸಂಖ್ಯೆ:ತೋ/ಸ್ಥಾ/ಸ/19/12-13, ದಿನಾಂಕ: 23-07-2012**

ವಿಜಿನಾಪುರ ಕೆರೆ(ಕೌದೇನಹಳ್ಳಿ ಸರ್ವೆ ನಂ.85) ಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಕೆ.ಪಿ.ಡಬ್ಲ್ಯೂ.ಡಿ. 2010-11ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.200.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸಂಖ್ಯೆ:051-11-000060 ರಂತೆ ಕಾಮಗಾರಿ ಸಂಕೇತವನ್ನು ಪಡೆದು ಟೆಂಡರ್‌ಗಿಟ್ಟ ಮೊತ್ತ ರೂ.164,33,690.76 ಲಕ್ಷಗಳಿಗೆ ಅನುಮೋದನೆ ಗೊಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾರ್ಯಪಾಲಕ ಅಭಿಯಂತರರು-1, ಪರಿಸರ ಕೋಶ ರವರು ಟೆಂಡರ್ ಪ್ರಕಟಣೆ ಸಂಖ್ಯೆ ಕಾ.ಅ-1/ಪ.ಕೋ(ಕೆರೆಗಳು)/ಟೆಂಡರ್/11/11-12(Call-2), ದಿನಾಂಕ:15-02-2012ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಒಬ್ಬರು

**ಮುಂದುವರೆದಿದೆ. . . .**

ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರು ಟೆಂಡರ್ ಷೆಡ್ಯೂಲ್ 'ಬಿ' ನಲ್ಲಿ ನಮೂದಿಸಿರುವ ದರಗಳು ಈ ಕೆಳಗಿನಂತಿವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | 2010-11ನೇ ಸಾಲಿನ ಪಿಡಬ್ಲ್ಯೂಡಿ ಮತ್ತು ಸಣ್ಣ ನೀರಾವರಿ ಇಲಾಖೆ ದರಸೂಚಿ ಅನ್ವಯ ಅನುಮೋದಿತ ಮೊತ್ತ | ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2010-11ನೇ ಸಾಲಿನ ಪಿಡಬ್ಲ್ಯೂಡಿ ಮತ್ತು ಎಂ.ಐ ಇಲಾಖೆ ದರಸೂಚಿ ಅನ್ವಯ ಅನುಮೋದಿತ ಮೊತ್ತ | 2011-12ನೇ ಸಾಲಿನ ಪಿಡಬ್ಲ್ಯೂಡಿ ಮತ್ತು 2010-11ನೇ ಸಾಲಿನ ಎಂ.ಐ. ಇಲಾಖೆ ದರಸೂಚಿ ಅನ್ವಯ ಅನುಮೋದಿತ ಮೊತ್ತ |
|---|---|---|---|---|---|
| 1. | ಶ್ರೀ.ಎನ್.ಶ್ರೀನಿವಾಸ ಮೂರ್ತಿ, (ಪರಿಚಿಥ ಕನ್ಸ್ಟ್ರಕ್ಷನ್) | 164,33,690.76 | 1,84,41,934.02 | +12.22% | +2.38% |

ಏಕೈಕ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ (ಪರಿಚಿಥ ಕಂಸ್ಟ್ರಕ್ಷನ್)ರವರು ದರ ಸಂಧಾನದಲ್ಲಿ ನಮೂದಿಸಿದ್ದ ದರಗಳು ಶೇಕಡಾ 1.75% ಕಡಿಮೆಯಾಗಿ ಕಾರ್ಯನಿರ್ವಹಿಸಲು ಒಪ್ಪಿಗೆ ಸೂಚಿಸಿದ ಮೇರೆಗೆ ರೂ.1,84,41,934.02 ಲಕ್ಷಗಳು (ಒಂದು ಕೋಟಿ ಎಂಭತ್ತುನಾಲ್ಕು ಲಕ್ಷದ ನಲವತ್ತೊಂದು ಸಾವಿರದ ಒಂಭೈನೂರ ಮೂವತ್ತು ನಾಲ್ಕು ರೂಪಾಯಿಗಳು ಮಾತ್ರ) ಕಾರ್ಯಪಾಲಕ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು ರೂ.1,84,41,934.02ಲಕ್ಷಗಳು(ಒಂದು ಕೋಟಿಯ ಎಂಭತ್ತನಾಲ್ಕು ಲಕ್ಷದ ನಲವತ್ತೊಂದು ಸಾವಿರದ ಒಂಭೈನೂರ ಮೂವತ್ತನಾಲ್ಕು ರೂಪಾಯಿಗಳು ಮಾತ್ರ)ಗಳಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲಿನ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ, (ಪರಿಚಿಥ ಕಂಸ್ಟ್ರಕ್ಷನ್) 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆ ಮತ್ತು 2010-11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಗಿಂತ **<u>ಶೇಕಡ + 12.22%</u>** ಹಾಗೂ ಈಗ ಚಾಲ್ತಿಯಲ್ಲಿರುವ ದರಗಳಾದ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆ ಮತ್ತು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರಗಳಿಗಿಂತ ಶೇಕಡಾ +2.38% ಹೆಚ್ಚಿನ ಮೊತ್ತವು ರೂ.1,84,41,934.02 ಲಕ್ಷಗಳು(ಒಂದು ಕೋಟಿ ಎಂಭತ್ತನಾಲ್ಕು ಲಕ್ಷದ ನಲವತ್ತೊಂದು ಸಾವಿರದ ಒಂಭೈನೂರ ಮೂವತ್ತು ನಾಲ್ಕು ರೂಪಾಯಿಗಳು ಮಾತ್ರ)ಗಳ ಟೆಂಡರ್‌ಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28-07-2012 ರ ಟಿಪ್ಪಣಿ.

**<u>ನಿರ್ಣಯ</u>:- ದಿನಾಂಕ:28-07-2012ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯಂತೆ ಟೆಂಡರ್‌ಗೆ ಅನುಮೋದನೆ ನೀಡಲು ಸಮಿತಿಯು ಒಪ್ಪಿದೆ.**

**<u>2. ವಿಷಯ ಸಂಖ್ಯೆ:ತೋ/ಸ್ಥಾ/ಸ/20/12-13, ದಿನಾಂಕ: 26-07-2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಲಯ, ಯೋಜನೆ ವಿಭಾಗದವರು ಅಳ್ಳಾಲಸಂದ್ರಕೆರೆಯನ್ನು

**ಮುಂದುವರೆದಿದೆ. . . .**

ಅಭಿವೃದ್ಧಿಗೊಳಿಸುವ ಸಲುವಾಗಿ Increasing the impounding capacity of allalasandra lake and allied works ಕಾಮಗಾರಿಯನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ:02–06–2012 ರಂದು ಕರೆದಿದ್ದು, ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಬಿಡ್‌ನ್ನು ದಿನಾಂಕ:03–07–2012 ರಂದು ತೆರೆಯಲಾಗಿದ್ದು, ಸದರಿ ಕಾಮಗಾರಿಯಲ್ಲಿ ಮೂರು ಗುತ್ತಿಗೆದಾರರು (1) ಶ್ರೀ.ಶ್ರೀನಿವಾಸಮೂರ್ತಿ(ಮೆ॥ಪರಿಚಿತ ಕನ್‌ಸ್ಟ್ರಕ್ಷನ್), (2) ಶ್ರೀ.ಸಿ.ಜಿ.ಚಂದ್ರಪ್ಪ, (3)ಶ್ರೀ.ಎಂ.ಎಸ್.ವೆಂಕಟೇಶ್ ರವರುಗಳು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಟೆಂಡರ್ ಮೊತ್ತ | ಇ.ಎಂ.ಡಿ. ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡ ನಮೂದು (2010–11ನೇ ಸಾಲಿನ ದರಪಟ್ಟಿ) |
|---|---|---|---|---|---|
| 1 | ಶ್ರೀ.ಶ್ರೀನಿವಾಸಮೂರ್ತಿ (ಮೆ॥ಪರಿಚಿತ ಕನ್‌ಸ್ಟ್ರಕ್ಷನ್) | 1,95,71,214.35 | 3,91,000.00 | 1,73,72,872.40 | –11.23% |
| 2 | ಶ್ರೀ.ಸಿ.ಜಿ.ಚಂದ್ರಪ್ಪ | 1,95,71,214.35 | 3,91,000.00 | 1,86,67,199.88 | –4.61% |
| 3 | ಶ್ರೀ.ಎಂ.ಎಸ್.ವೆಂಕಟೇಶ್ | 1,95,71,214.35 | 3,91,000.00 | 1,95,71,213.74 | ಎಸ್.ಆರ್.ದರ |

ಸದರಿ ಕರೆಯಲಾದ ಟೆಂಡರ್‌ನಲ್ಲಿ ಎಲ್–1, ಶ್ರೀ.ಶ್ರೀನಿವಾಸಮೂರ್ತಿ (ಮೆ॥ಪರಿಚಿತ ಕನ್‌ಸ್ಟ್ರಕ್ಷನ್), ಗುತ್ತಿಗೆದಾರರು ರೂ.1,73,72,872.40(ಒಂದು ಕೋಟಿ ಎಪ್ಪತ್ಮೂರು ಲಕ್ಷದ ಎಪ್ಪತ್ತೆರೆಡು ಸಾವಿರದ ಎಂಟುನೂರ ಎಪ್ಪತ್ತೆರೆಡು ರೂಪಾಯಿಗಳು ಮಾತ್ರ)ಗಳನ್ನು, ಸದರಿ ಕಾಮಗಾರಿಗಾಗಿ ನಮೂದಿಸಿರುತ್ತಾರೆ. ಇವರು ನಮೂದಿಸಿದ ದರವು ಅನುಮೋದಿತವಾದ ಅಂದಾಜು ಪಟ್ಟಿಯ ಟೆಂಡರ್ ಮೊತ್ತಕ್ಕಿಂತ ಕಡಿಮೆ ನಮೂದಿಸಿರುತ್ತಾರೆ. 2010–11ನೇ ಸಾಲಿನ ದರಗಳಿಗಿಂತ ಶೇಕಡಾ ಕಡಿಮೆ ದರಗಳನ್ನು –11.23% ರಷ್ಟು ನಮೂದಿಸಿರುತ್ತಾರೆ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಮೂವ್ವರು ಗುತ್ತಿಗೆದಾರರ ಪೈಕಿ ಟೆಂಡರ್‌ನಲ್ಲಿ ಎಲ್–1, ಶ್ರೀ.ಶ್ರೀನಿವಾಸಮೂರ್ತಿ(ಮೆ॥ಪರಿಚಿತ ಕನ್‌ಸ್ಟ್ರಕ್ಷನ್), ಗುತ್ತಿಗೆದಾರರು ಕನಿಷ್ಟ ದರ ನಮೂದಿಸಿರುತ್ತಾರೆ.

ಆದುದರಿಂದ, ಸದರಿ ಎಲ್ಲಾ ಅಂಶಗಳನ್ನು ಸಮಿತಿಯ ಅವಗಾಹನೆಗೆ ತರುತ್ತಾ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗದವರು, ಆಳ್ಳಾಳಸಂದ್ರ ಕೆರೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ Increasing the impounding capacity of allalasandra lake and allied works ಕಾಮಗಾರಿಯನ್ನು ತಕ್ಷಣವೇ ಕೈಗೆತ್ತಿಕೊಳ್ಳಲು ಟೆಂಡರ್‌ನಲ್ಲಿ ಯಶಸ್ವಿಯಾದ ಎಲ್–1, ಶ್ರೀ.ಶ್ರೀನಿವಾಸಮೂರ್ತಿ (ಮೆ॥ಪರಿಚಿತ ಕನ್‌ಸ್ಟ್ರಕ್ಷನ್) ರವರಿಗೆ

**ಮುಂದುವರೆದಿದೆ. . .**

ಕಾರ್ಯಾದೇಶ ನೀಡುವ ಸಂಬಂಧ ನಿರ್ಣಯ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:17–07–2012 ರ ಟಿಪ್ಪಣಿ.

**<u>ನಿರ್ಣಯ:–</u> ದಿನಾಂಕ:17–07–2012ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯಂತೆ ಟೆಂಡರ್‌ಗೆ ಅನುಮೋದನೆ ನೀಡಲು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು:–</u>**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- *ಅಪರ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ)ರವರಿಗೆ ಕಳುಹಿಸಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ 1, 2, 3, 4, 5,) ರವರಿಗೆ ಕಳುಹಿಸಲಾಗಿದೆ.
- **ಕಾರ್ಯಪಾಲಕ ಅಭಿಯಂತರರು (ಯೋಜನೆ–**ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.

**ಮುಂದುವರೆದಿದೆ. . . .**

**ದಿನಾಂಕ: 23-08-2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮುಂದುವರೆದ ಹಾಗೂ ಪ್ರಗತಿಯಲ್ಲಿರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 3 | ತಿಮ್ಮರಾಜು | ಸದಸ್ಯರು | 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ / ದಕ್ಷಿಣ) |
| 4 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 4 | ಮುಖ್ಯ ಲೆಕ್ಕಾಧಿಕಾರಿ |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ಮತ್ತು (ಕೆರೆಗಳು-ಪರಿಸರ ಕೋಶ) |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | | |
| 7 | ಶ್ರೀಮತಿ.ಶಕುಂತಲ.ಎನ್. | ಸದಸ್ಯರು | 6 | ವಲಯ ಅರಣ್ಯಾಧಿಕಾರಿ(ಪೂರ್ವ/ಪಶ್ಚಿಮ/ದಕ್ಷಿಣ/ ಬೊಮ್ಮನಹಳ್ಳಿ / |
| 8 | ಶ್ರೀಮತಿ.ಸರಳ | ಸದಸ್ಯರು | 7 | ರಾ.ರಾ.ನಗರ/ಯಲಹಂಕ/ದಾಸರಹಳ್ಳಿ) |
| 9 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 8 | ತೋಟಗಾರಿಕೆ ಅಧೀಕ್ಷಕರು(ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ ರಾ.ರಾ.ನಗರ/ಯಲಹಂಕ/ದಾಸರಹಳ್ಳಿ) |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಸಮಿತಿಯು, ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯ ಟೆಂಡರ್ ಕರೆದು, ಸಮಿತಿಯ ಗಮನಕ್ಕೆ ತರದೆ ನಿರ್ವಹಣೆ ಅವಧಿಯನ್ನು ಮುಂದುವರೆಸಿರುವ ಬಗ್ಗೆ ಮಾಹಿತಿ ನೀಡುವಂತೆ ಪತ್ರ ಮುಖೇನ ಸೂಚಿಸಿ, ಸುಮಾರು ಎರಡು ತಿಂಗಳು ಕಳೆದರೂ ಸಹ ಸಮಿತಿಯ ಸ್ಥಿರೀಕರಣಕ್ಕೆ ಮಾಹಿತಿಯನ್ನು ಒದಗಿಸದಿರುವ ಬಗ್ಗೆ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸುತ್ತಾ, ಮಾಹಿತಿಯನ್ನು ನೀಡಲು ನಿರ್ಲಕ್ಷತೆ ತೋರುವ ಅಧಿಕಾರಿಗಳ ವಿರುದ್ಧ ಆಯುಕ್ತರಿಗೆ ಶಿಫಾರಸ್ಸು ಮಾಡಲಾಗುವುದೆಂದು, ಇದೇ ರೀತಿ ಮುಂದುವರೆದರೆ ಈ ಕುರಿತು ಕ್ರಮ ಕೈಗೊಳ್ಳಲು ಟಿವಿಸಿಸಿ / ಬಿ.ಎಂ.ಟಿ.ಎಫ್ ಕಛೇರಿಗಳಿಗೆ ಪತ್ರ ಬರೆದು ಸೂಕ್ತ ತನಿಖೆ ಮಾಡುವಂತೆ ತಿಳಿಸಲಾಗುವುದೆಂದು ಎಚ್ಚರಿಕೆ ನೀಡಿ, ಕೋರಿರುವ ಮಾಹಿತಿಯನ್ನು ಸಕಾಲದಲ್ಲಿ ನೀಡಲು ಕ್ರಮವಹಿಸುವಂತೆ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಗುತ್ತಿಗೆದಾರರಿಂದ, ಖಾಸಗಿಯವರಿಂದ ಹಾಗೂ ಪಾಲಿಕೆ ಸಿಬ್ಬಂದಿ ವರ್ಗದವರಿಂದ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳ ವಿವರಣಾ ಪಟ್ಟಿಯನ್ನು ನೀಡುವಂತೆ ಸೂಚಿಸಿದ್ದರೂ ಸಹ ಮಾಹಿತಿಯನ್ನು ಒದಗಿಸಲು ವಿಳಂಬ ಮಾಡುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾ, ಪ್ರತಿ ಸಭೆಯಲ್ಲಿ ಅಧಿಕಾರಿಗಳಿಗೆ ಪದೇ ಪದೇ ಮಾಹಿತಿಗಳನ್ನು ಒದಗಿಸುವಂತೆ ಸೂಚಿಸುವುದು ಬೇಸರದ ಸಂಗತಿಯಾಗಿದೆಯೆಂದು, ಇನ್ನು ಮುಂದೆ ವಿಳಂಬಕ್ಕೆ ಆಸ್ಪದ ನೀಡದಂತೆ ಸಮಿತಿಯು ಕೋರುವ ವಿವರಗಳಿಗೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು.

**ಮುಂದುವರೆದಿದೆ. . . .**

***ಶ್ರೀ.ಡಿ.ಎಂ.ಸುಬ್ಬಣ್ಣ, ತೋಟಗಾರಿಕೆ ಅಧೀಕ್ಷಕರು(ಪಶ್ಚಿಮ)*** ಸ್ಥಿರೀಕರಣಕ್ಕೆ ಸಂಬಂಧಪಟ್ಟ ಕಡತಗಳು ಸಿ.ಸಿ.ಎಫ್. ರವರ ಕಛೇರಿಯಲ್ಲಿದ್ದು, ವಿಶೇಷ ಆಯುಕ್ತರವರಿಗೆ ಹೋಗಿ ನಂತರ ಸಮಿತಿಗೆ ಬರುತ್ತದೆಂದು ತಿಳಿಸಿದರು. ಸಿ.ಸಿ.ಎಫ್. ಕಛೇರಿಯಲ್ಲಿ ತಾಂತ್ರಿಕ ಸಹಾಯಕರ ಹುದ್ದೆ ಖಾಲಿ ಇದ್ದು, ಕಡತಗಳ ವಿಲೇವಾರಿ ಮಾಡಲು ಹಾಗೂ ಕಛೇರಿ ಕೆಲಸಕಾರ್ಯಗಳು ತ್ವರಿತಗತಿಯಲ್ಲಿ ನಡೆಸಲು ಅಡಚಣೆಯುಂಟಾಗಿರುತ್ತದೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ತೋಟಗಾರಿಕೆ ಇಲಾಖೆಯಲ್ಲಿ ಜಂಟಿ ನಿರ್ದೇಶಕರು ಇಲ್ಲದೇ ಇರುವುದರಿಂದ, ಸಮಿತಿಯು ಕೋರುವ ಮಾಹಿತಿಗಳು ಸರಿಯಾದ ರೀತಿಯಲ್ಲಿ ಲಭ್ಯವಿಲ್ಲದೆ, ವಿವರಗಳನ್ನು ಒದಗಿಸಲು ತುಂಬಾ ವಿಳಂಬವಾಗುತ್ತಿರುವುದರಿಂದ, ತೋಟಗಾರಿಕೆ ಅಧೀಕ್ಷಕರುಗಳಲ್ಲಿ ಒಬ್ಬರಿಗೆ ಅಥವಾ ಸೇವೆಯಲ್ಲಿ ಹಿರಿಯರಾದ ಅಧಿಕಾರಿಗೆ ಪ್ರಭಾರದ ಮೇಲೆ ಜಂಟಿ ನಿರ್ದೇಶಕರು(ತೋಟಗಾರಿಕೆ) ಆಗಿ ನಿಯೋಜಿಸಿ, ಸಮಿತಿಯು ಕೋರುವ ಮಾಹಿತಿಯನ್ನು ಎಂಟು ವಲಯಗಳಿಂದ ಪಡೆದು ಸಮಿತಿಗೆ ನಿಗಧಿತ ಅವಧಿಯಲ್ಲಿ ಒದಗಿಸಲು ಸುಲಭವಾಗುತ್ತದೆಂದು ಸಲಹೆ ನೀಡಿದರು.

**ದಾಸರಹಳ್ಳಿ ಕೆರೆಯ** ಸಮಗ್ರ ಅಭಿವೃದ್ಧಿ ಹಂತ– 2 ರ ಕಾಮಗಾರಿ**, ದೊಡ್ಡಕನ್ನಹಳ್ಳಿಕೆರೆಯ** ಸಮಗ್ರ ಅಭಿವೃದ್ಧಿ ಕಾಮಗಾರಿ**, ಶ್ರೀಗಂಧದಕಾವಲು ಕೆರೆ** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ**, ದೀಪಾಂಜಲಿ** ಕೆರೆಗೆ ಕಲುಷಿತ ನೀರನ್ನು ಶುದ್ದೀಕರಣ ಗೊಳಿಸುವ ಕಾಮಗಾರಿ**, ಮುನ್ನೇಗೊಳಲು** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ, ದೊರೆಕೆರೆಯ ಹಂತ –2 ರಲ್ಲಿ ಸಿಲ್ಟ್ ಡ್ರಾಫ್ಟ್ ನಿರ್ಮಾಣ ಕಾಮಗಾರಿ, **ದೀಪಾಂಜಲಿ** ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ –3, **ಮತ್ತಿಕೆರೆಯ** ಸಮಗ್ರ ಅಭಿವೃದ್ಧಿ ಕಾಮಗಾರಿ, ಜೆ.ಪಿ.ಪಾರ್ಕ್‌ನಲ್ಲಿರುವ ಕೆರೆಯ ಅಭಿವೃದ್ಧಿ ಕಾಮಗಾರಿ, **ಕೂಡ್ಲು ಚಿಕ್ಕಕೆರೆ,** ಸರ್ವೆ ನಂ.70, ಅಭಿವೃದ್ಧಿಗೊಳಿಸುವ ಕಾಮಗಾರಿ, **ದೇವಸಂದ್ರಕೆರೆಯ** ಮಳೆನೀರು ಸಂಗ್ರಹಣಾ ಕಾಮಗಾರಿ, **ದೊಡ್ಡಬೊಮ್ಮಸಂದ್ರ** ಕೆರೆ ಸಮಗ್ರ ಅಭಿವೃದ್ಧಿ ಹಂತ –1ರ ಕಾಮಗಾರಿ, **ಉತ್ತರಹಳ್ಳಿ ಕೆರೆ** ಹಂತ –3 ರ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಕರೆಯಲು ಸಮಿತಿಯ ವತಿಯಿಂದ ಈಗಾಗಲೇ ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿವೆ ಎಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿ, ತ್ವರಿತವಾಗಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

2012–13ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಗೆ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಕೆರೆಗಳ ಅಭಿವೃದ್ಧಿಗೆ ಕಾಯ್ದಿರಿಸಿರುವ ಅನುದಾನಕ್ಕನುಗುಣವಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

***ಅಧ್ಯಕ್ಷರು*** *ಅರಣ್ಯ ಇಲಾಖೆ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ,* ಪಾಲಿಕೆ ವ್ಯಾಪ್ತಿಯಲ್ಲಿ ಯಾವ್ಯಾವ ವಲಯಗಳಲ್ಲಿ ಎಷ್ಟೆಷ್ಟು ಸಸಿಗಳನ್ನು ನೆಟ್ಟು, ಅವುಗಳಿಗೆ ವೃಕ್ಷ ಕವಚಗಳನ್ನು ಅಳವಡಿಸಲಾಗಿದೆ ಎಂಬ ವಿವರ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿ ಒಣಗಿರುವ, ಅಪಾಯಕಾರಿಯಾಗಿರುವ, ಶಿಥಿಲಗೊಂಡಿರುವ ಹಾಗೂ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿರುವ ಮರಗಳನ್ನು ತೆಗೆಯುವಂತೆ ಸಮಿತಿಯು ಸುತ್ತೋಲೆ ಹೊರಡಿಸಿದ್ದು, ಅದರಂತೆ, ಯಾವ್ಯಾವ ವಲಯದಲ್ಲಿ ಎಷ್ಟೆಷ್ಟು ಮರಗಳನ್ನು ತೆಗೆಯಲಾಗಿದೆ ಎಂಬ ಬಗ್ಗೆ ಸಮಿತಿಗೆ ಮಾಹಿತಿ ಒದಗಿಸುವಂತೆ ಪತ್ರ ಮುಖೇನ ಸೂಚಿಸಿದ್ದರೂ ಸಹ ಇದುವರೆವಿಗೂ ಸಮಿತಿಗೆ ಕೋರಿರುವ ಮಾಹಿತಿಗಳನ್ನು ನೀಡದೆ ವಿಳಂಬ ಮಾಡುತ್ತಿರುವುದಕ್ಕೆ ಸ್ಪಷ್ಟೀಕರಣ ನೀಡುವಂತೆ ಸೂಚಿಸಿದರು ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿ ಒಣಗಿರುವ, ಅಪಾಯಕಾರಿಯಾಗಿರುವ, ಶಿಥಿಲಗೊಂಡಿರುವ ಹಾಗೂ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿರುವ ಮರಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ತೆಗೆದುಕೊಂಡು ಸಮಿತಿಗೆ ವರದಿ ನೀಡುವಂತೆ ಸೂಚಿಸಿದರು.

**ಮುಂದುವರೆದಿದೆ.** . . . .

ಸಮಿತಿಯು ಕೋರುವ ಮಾಹಿತಿಯನ್ನು ಅಧಿಕಾರಿಗಳು ನಿಗಧಿತ ಅವಧಿಯಲ್ಲಿ ಒದಗಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರು. ಅಧ್ಯಕ್ಷರನ್ನು, ಮಾಧ್ಯಮದವರು, ಪತ್ರಿಕೆಯವರು ಮತ್ತು ಸಾರ್ವಜನಿಕರು, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಮಾಡುವಾಗ ಮಾಹಿತಿಗಳು ಲಭ್ಯವಿಲ್ಲದೆ, ಅವರಿಗೆ ಉತ್ತರಿಸಲು ಕಷ್ಟಕರವಾಗುತ್ತದೆ. ಆದುದರಿಂದ, ಸಮಿತಿಯು ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿ ಒಳ್ಳೆಯ ಹೆಸರು ಗಳಿಸಲು ಅಧಿಕಾರಿಗಳು ಸಮಿತಿಯೊಂದಿಗೆ ಹೊಂದಾಣಿಕೆಯಿಂದ, ವಿಶ್ವಾಸದಿಂದ ಸಹಕಾರ ನೀಡಿದಲ್ಲಿ ಮಾತ್ರ ಸಾಧ್ಯವಾಗುತ್ತದೆಂದು, ಆ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಸಹಕರಿಸುವಂತೆ ಸೂಚಿಸಿದರು.

**ಶ್ರೀಮತಿ.ಶಕುಂತಲಾ, ಸದಸ್ಯರು** : ನಗರದ ನಾಗರೀಕರು ತಮ್ಮ ಕುಂದುಕೊರತೆಗಳು ಹಾಗೂ ಸಮಸ್ಯೆಗಳ ಬಗ್ಗೆ ಸ್ಥಳೀಯ ಸದಸ್ಯರಿಗೆ ದೂರವಾಣಿ ಕರೆ ಮಾಡಿ ಅಥವಾ ಮನೆಯ ಹತ್ತಿರ ಬಂದು ಮನವಿ ಸಲ್ಲಿಸುತ್ತಾರೆ. ಆದರೆ, ವಾರ್ಡ್ ವ್ಯಾಪ್ತಿಯಲ್ಲಿ ಮರಗಳು ಮಳೆಗಾಳಿಯಿಂದ ಶಿಥಿಲವಾಗಿ ಬಿದ್ದು ಹೋದರೆ, ಅದನ್ನು ತೆರೆವುಗೊಳಿಸಲು ತುಂಬಾ ಕಷ್ಟವಾಗುತ್ತದೆ. ಏಕೆಂದರೆ, ನಾವು ಅಧಿಕಾರಿಗಳನ್ನು ಸಂಪರ್ಕಿಸಿ ಸಾರ್ವಜನಿಕರಿಗೆ, ಸಂಚಾರಕ್ಕೆ ತೊಂದರೆಯಾಗಿರುವ ಬಿದ್ದುಹೋಗಿರುವ ಮರವನ್ನು ಕೂಡಲೇ ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ದೂರವಾಣಿ ಮುಖಾಂತರ ಕೋರಿದರೂ ಸಹ, ಅಧಿಕಾರಿಗಳು ತುಂಬಾ ಬೇಜವಾಬ್ದಾರಿಯಿಂದ, ಉದ್ಧಟತನದಿಂದ ಉತ್ತರಿಸುತ್ತಾರೆ. ಇದರಿಂದ ವಾರ್ಡ್‌ನಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಅಧಿಕಾರಿಗಳು ಸದಸ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬ ಪರಿಜ್ಞಾನವು ಇರುವುದಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಅಧ್ಯಕ್ಷರು ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಅಧ್ಯಕ್ಷರು ಮಾತನಾಡುತ್ತಾ, ಪಾಲಿಕೆ ಸದಸ್ಯರು ಸಾರ್ವಜನಿಕರ ಸೇವೆಯಲ್ಲಿ ತೊಡಗಿರುವವರು, ಅಧಿಕಾರಿಗಳು ಮೊದಲು ಸದಸ್ಯರುಗಳಿಗೆ ಗೌರವವನ್ನು ಕೊಡುವುದನ್ನು ರೂಡಿಸಿಕೊಳ್ಳುವಂತೆ ಹಾಗೂ ಸಮಿತಿ ಸದಸ್ಯರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವಂತೆ ಹಾಗೂ ಸದಸ್ಯರುಗಳಿಗೆ ಬೇಜವಾಬ್ದಾರಿಯಿಂದ ಉತ್ತರಿಸುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿದರು.

*ದಿನಾಂಕ:01-04-2012 ರಿಂದ ಇಲ್ಲಿಯವರೆಗೆ ತೋಟಗಾರಿಕೆ ಅಧೀಕ್ಷಕರುಗಳಿಗೆ ಮತ್ತು ವಲಯ ಅರಣ್ಯಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ ವೆಚ್ಚದ ವಿವರಗಳನ್ನು ಸಮಿತಿಗೆ ಒದಗಿಸುವಂತೆ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸಿದ್ದು, ಈ ಕುರಿತು ಚರ್ಚಿಸಲಾಯಿತು.*

*ಸಮಿತಿಯು ದಿನಾಂಕ:07-06-2012 ರಂದು 2010-11 ಮತ್ತು 2011-12ನೇ ಸಾಲಿನಲ್ಲಿ ಕಾಮಗಾರಿ ಅಭಿವೃದ್ಧಿಪಡಿಸಿರುವ, ಪ್ರಗತಿಯಲ್ಲಿರುವ ಕಾಮಗಾರಿ ಹಾಗೂ ಕಾಮಗಾರಿ ಕೈಗೊಳ್ಳಬೇಕಾಗಿರುವ ವಿವರಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.*

**ಮುಂದುವರೆದಿದೆ. . . . .**

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **ವಿಷಯ ಸಂಖ್ಯೆ:ತೋ/ಸ್ಥಾ/ಸ/21/12-13, ದಿನಾಂಕ: 07-08-2012**

ರಾಜರಾಜೇಶ್ವರಿ ನಗರ ವಲಯದ ಹಂದ್ರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ-ಪ್ರಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 04 (ನಾಲ್ಕು) ಟೆಂಡರ್‌ಗಳು ಸ್ವೀಕೃತವಾಗಿದ್ದು, 03 (ಮೂರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ **ಶ್ರೀ.ಎನ್.ಶ್ರೀನಿವಾಸಮೂರ್ತಿ** (ಮೆ॥ಪರಿಚಿತ ಕನ್‌ಸ್ಟ್ರಕ್ಷನ್) ರವರು ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.350.00 ಲಕ್ಷಗಳ ಅಂದಾಜಪಟ್ಟಿಗೆ 2011-12ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಪರಿಸರ ಕೋಶ, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.3,46,19,561.29 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ **ಶ್ರೀ.ಎನ್.ಶ್ರೀನಿವಾಸಮೂರ್ತಿ** (ಮೆ॥ಪರಿಚಿತ ಕನ್‌ಸ್ಟ್ರಕ್ಷನ್) ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ **ರೂ.3,13,31,362.00** ಅನುಮೋದಿತ 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡಾ 9.50% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸಹಿತ) ರೂ.3,13,31,362.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ.ಯು.ಡಿ.ಡಿ/335/ಎಮ್‌ಎನ್‌ವೈ/ 2007 (ಭಾ) ದಿನಾಂಕ:11-05-2009ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಮ್‌ಎನ್‌ವೈ/2010, ಬೆಂಗಳೂರು ದಿನಾಂಕ: 02-04-2011 ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

**ಮುಂದುವರೆದಿದೆ.** . . . .

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಎನ್.ಶ್ರೀನಿವಾಸಮೂರ್ತಿ** (ಮೆ॥ಪರಿಚಿತ ಕನ್ಸ್‌ಟ್ರಕ್ಷನ್)ರವರು 2011–12ನೇ ಸಾಲಿನ ಲೋಕೋಪಯೋಗಿ ಹಾಗೂ 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 9.50% ರಷ್ಟು ಕಡಿಮೆ ದರಗಳು ಅಥವಾ **ರೂ.3,13,31,362.00** (ರೂಪಾಯಿ ಮೂರು ಕೋಟಿ ಹದಿಮೂರು ಲಕ್ಷದ ಮೂವತ್ತೊಂದು ಸಾವಿರದ ಮುನ್ನೂರ ಅರವತ್ತೆರಡು ಮಾತ್ರ)ಗಳ ಟೆಂಡರ್‌ಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03–08–2012 ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:03–08–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಲಾಗಿದೆ.
- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರಿಗೆ / ಉಪ ಅರಣ್ಯ ಸಂರಕ್ಷಣಾಧಿಕಾರಿರವರಿಗೆ ಕಳುಹಿಸಲಾಗಿದೆ..
- ಕಾರ್ಯಪಾಲಕ ಅಭಿಯಂತರರು(ಕೆರೆಗಳು–ಪರಿಸರ ಕೋಶ) –1, 2, 3, 4 ಮತ್ತು 5 ರವರಿಗೆ ಕಳುಹಿಸಲಾಗಿದೆ.
- ಕಾರ್ಯಪಾಲಕ ಅಭಿಯಂತರರು(ಯೋಜನೆ–ದಕ್ಷಿಣ)ರವರಿಗೆ ಕಳುಹಿಸಲಾಗಿದೆ.
- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು(ಉತ್ತರ–ದಕ್ಷಿಣ) ರವರಿಗೆ ಕಳುಹಿಸಲಾಗಿದೆ.
- ತೋಟಗಾರಿಕೆ ಅಧೀಕ್ಷಕರು (ದಕ್ಷಿಣ–1 ಮತ್ತು –2) ರವರಿಗೆ ಕಳುಹಿಸಲಾಗಿದೆ.
- ವಲಯ ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ರಾ.ರಾ.ನ./ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- *ಕಛೇರಿ ಪ್ರತಿ.*